# ದಿವಾಣಿ ನ್ಯಾಯಾಧೀಶರು ಹಾಗೂ ಜೆ ಎಂ ಎಫ್ ಸಿ ನ್ಯಾಯಾಲಯ, ನವಲಗುಂದ.

## ಸಿ. ಸಿ. ನಂಃ 281.2019

ಪಿ.ಡಬ್ಲೂ- 3
ಸಿ.ಡಬ್ಲೂ- 5

| | | |
|---|---|---|
| ಹೆಸರು | ಃ- | ದೇವಪ್ಪ ಸೂರಿನ |
| ತಂದೆ / ಗಂಡನ ಹೆಸರು | ಃ- | ಮಲ್ಲಪ್ಪ |
| ವಯಾ | ಃ- | 70 ವರ್ಷ |
| ಉದ್ಯೋಗ | ಃ- | ವ್ಯವಸಾಯ |
| ವಾಸಸ್ಥಳ | ಃ- | ತಿರಲಾಪುರ |
| ಸತ್ಯ ಪ್ರತಿಜ್ಞೆ ಮೇರೆಗೆ | ಃ- | ದಿನಾಂಕಃ 12-11-2024 |

*ಮುಖ್ಯ ವಿಚಾರಣೆ ಃ- ಶ್ರೀ ಸ.ಸ.ಅ. ರವರಿಂದ ಃ*

ಚಾಸಾ-1 ಮತ್ತು ಚಾಸಾ-6 ನನ್ನ ಮಗನಾಗಬೇಕು. ಚಾಸಾ-2 ಮತ್ತು ಚಾಸಾ-3 ರವರು ನನ್ನ ಓಣಿಯವರು ಆಗಬೇಕು. ಚಾಸಾ-4 ನನ್ನ ತಮ್ಮನಾಗಬೇಕು. ಚಾಸಾ-7 ನನ್ನ ಸಂಬಂಧಿಕನಾಗಬೇಕು.

4 ನೇ ಆರೋಪಿತಳು ನ್ಯಾಯಾಲಯದ ಮುಂದೆ ಹಾಜರಿದ್ದು ಸದರಿಯವರು ನನಗೆ ಸಂಬಂಧಿಕಳಾಗಬೇಕು.

2018 ರಲ್ಲಿ ಸಂಜೆ ಸುಮಾರು 06-00 ಗಂಟೆಗೆ ಜಾಗೆಯ ಸಂಬಂಧ ಆರೋಪಿತರು ಮತ್ತು ಚಾಸಾ-1 ರವರ ನಡುವೆ ಜಗಳ ಉಂಟಾಗಿದ್ದು ನನ್ನ ಮಗನಾದ ಚಾಸಾ-1 ರವರಿಗೆ 1 ನೇ ಆರೋಪಿತನು ನ್ಯಾಯಾಲಯದ ಮುಂದೆ ಇದ್ದ ಮು.ಮಾಲು 01 ಕಬ್ಬಿಣದ ರಾಡನಿಂದ ತಲೆಯ ಭಾಗಕ್ಕೆ ಹೊಡೆದಿರುತ್ತಾನೆ. 2 ನೇ ಆರೋಪಿತನು ಚಾಸಾ-1 ರವರಿಗೆ ನ್ಯಾಯಾಲಯದ ಮುಂದೆ ಇದ್ದ ಮು.ಮಾಲು 02 ಕಟ್ಟಿಗೆಯ ಬಡಿಗೆಯಿಂದ ತಲೆಗೆ, ಬುಜಕ್ಕೆ ಮತ್ತು ಕೈಗೆ ಹೊಡೆದಿರುತ್ತಾನೆ.

ನಂತರದಲ್ಲಿ ಚಾಸಾ-1 ರವರನ್ನು ನಾನು ಮತ್ತು ಚಾಸಾ-4 ರವರು ಸೇರಿ ನವಲಗುಂದದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು ಚಿಕಿತ್ಸೆ ನೀಡಿ, ನಂತರ ಹೆಚ್ಚಿನ ಚಿಕಿತ್ಸೆಗೆಂದು ಕೀಮ್ಸ್‌ಗೆ ಹೋಗಲು ಹೇಳಿರುತ್ತಾರೆ ನಾವು ಹೋಗಿರುತ್ತೇವೆ.

(ಈ ಹಂತದಲ್ಲಿ ನ್ಯಾಯಾಲಯದದ ಮುಂದೆ 1 ಮತ್ತು 2 ಆರೋಪಿತನು ಗೈರು ಹಾಜರಿದ್ದು, ಆರೋಪಿಯ ಗುರುತಿಗೆ ಯಾವುದೇ ತಕರಾರು ಇಲ್ಲಾ ಎಂದು ಅರ್ಜಿ ಸಲ್ಲಿಸಿರುತ್ತಾರೆ).

*(*ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಎಂದ ಮಾನ್ಯ ಸ ಸ ಅ ರವರು ಕೋರಿದ್ದರಿಂದ**,** ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ**,** ಪಾಟೀಸವಾಲಿಗೆ ಅನುಮತಿಯನ್ನು ನೀಡಲಾಯಿತು**.)**

ಪಾಟೀಸವಾಲು ಃ ಮಾನ್ಯ ಸ ಸ ಅ ರವರಿಂದ ಃ **-**

ದಿನಾಂಕ 04-11-2018 ರಂದು ರಾತ್ರಿ 11-00 ಗಂಟೆಗೆ ಎಲ್ಲಾ ಆರೋಪಿತರೂ ಗುಂಪಿ ಕಟ್ಟಿಕೊಂಡು ಬಂದು ಚಾಸಾ-1 ರವರಿಗೆ ಬೋಸಡಿಮಗನ ಬಹಳ ಆಗ್ಯೈತಿ, ಊರಿಗೆ ಬುದ್ದಿ ಮಾತು ಹೇಳಳಿಕೆ ಬರುತ್ತಾನೆ ಇವಾ ಇವನಿಗೆ ಬಿಡಾಕ ಹೋಗಬೇಡಾ ಅಂತಾ ಅವಾಚ್ಯ ಶಬ್ಬದಿಂದ ಬೈದಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸಂಜೆ 06-00 ರಿಂದ ಜಗಳ ಶುರುವಾಗಿತ್ತು ಎಂದು ನುಡಿಯುತ್ತಾರೆ.

1 ನೇ ಆರೋಪಿತನು ತನ್ನ ಕೈಯಲ್ಲಿ ಇದ್ದ ಕಬ್ಬಿಣದ ರಾಡನಿಂದ ಚಾಸಾ-1 ರವರ ತಲೆಗೆ ಹೊಡೆದು ಬಾರಿ ಪ್ರಮಾಣದ ಗಾಯ ಉಂಟು ಮಾಡಿರುತ್ತಾನೆ ಎಂದರೆ ಸರಿ.

2 ನೇ ಆರೋಪಿತನು ಚಾಸಾ-1 ರವರಿಗೆ ಕಟ್ಟಿಗೆ ಬಡಿಗೆಯಿಂದ ಬಲಬುಜಕ್ಕೆ ಹೊಡೆದಿರುತ್ತಾನೆ ಎಂದರೆ ಸರಿ.

4 ನೇ ಆರೋಪಿತಳು ಚಾಸಾ-1 ರವರ ಬಟ್ಟೆಯನ್ನು ಹಿಡಿದು ಎಳೆದಾಡಿದಳು ಎಂದರೆ ಸರಿ. ಅಲ್ಲಿ ಜಗಳವನ್ನು ಕೇಳಿ ನಾನು ಮತ್ತು ಚಾಸಾ-4 ಮತ್ತು ಚಾಸಾ-7 ಜಗಳವನ್ನು ಬಿಡಿಸಿರುತ್ತೇವೆ ಎಂದರೆ ಸರಿ. ಆರೋಪಿತರು ನಮಗೆ ಈ ಸಲ ಬದುಕಿ ಉಳಿದಿರಿ ಇನ್ನೊಮ್ಮೆ ಸಿಕ್ಕಲ್ಲಿ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ.

ಕೀಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದ ನಂತರದಲ್ಲಿ ಚಾಸಾ-1 ರವರು ಠಾಣೆಗೆ ಬಂದ ಮಾಹಿತಿಯನ್ನು ನೀಡಿರುತ್ತಾರೆ ಎಂದರೆ ಸರಿ.

<u>*ಪಾಟೀಸವಾಲು ಆರೋಪಿ ಪರ ಶ್ರೀ ಪಿ ಹೆಚ್ ಕೆ ವಕೀಲರಿಂದ ಃ-*</u>

ನನ್ನ ಮತ್ತು ಆರೋಪಿತರ ಮನೆ ಅಕ್ಕ ಪಕ್ಕದಲ್ಲಿ ಇದೆ ಎಂದರೆ ಸರಿ. ನನ್ನ ಮನೆಯ ಮುಖ್ಯ ದ್ವಾರದ ಲಗತ್ತು 1 ನೇ ಹಿಸ್ಸಾ ಉತ್ತರ ದಿಕ್ಕಿನಲ್ಲಿ ಚಾಸಾ-6 ರವರ ಹಿಸ್ಸಾ ಇರುತ್ತದೆ ಎಂದರೆ ಸರಿ. ಸದರಿ ಹಿಸ್ಸೆಗೆ ಲಗತ್ತು ಚಾಸಾ-1 ರವರ ಮನೆ ಇರುತ್ತದೆ ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಬಸಪ್ಪ ಮಹಾದೇವಪ್ಪ ಸೂರಿನ ರವರ ಮನೆ ಇರುತ್ತದೆ ಎಂದು ನುಡಿಯುತ್ತಾರೆ.

1 ನೇ ಆರೋಪಿತನು ಮತ್ತು ಚಾಸಾ-1 ರವರ ಮನೆ ಎದುರು-ಬದರು ಇರುತ್ತದೆ ಎಂದರೆ ಸರಿ. ಚಾಸಾ-1 ರವರ ಮನೆಗೆ ಲಗತ್ತು ನನ್ನ ಮನೆ ಇರುತ್ತದೆ ಅಂದರೆ ಸರಿಯಲ್ಲ. ನಾನು ಮತ್ತು ಚಾಸಾ-6 ರವರು ಕೂಡಿ ವಾಸ ಮಾಡುತ್ತಿದ್ದೇವೆ.

1 ಮತ್ತು 4 ನೇ ಆರೋಪಿತಳ ಮಗಳು ಮಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದಾಳೆ ಎಂದರೆ ಸರಿ. 1 ನೇ ಆರೋಪಿತನೂ ಸಹ ಮಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದಾನೆ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆತನು ಮೊದಲಿಗೆ ಇಲ್ಲಿಯೆ ಇದ್ದನು ಈಗ ಹಾಲಿ ಆತನು ಎಲ್ಲಿಯೊ ಹೋಗಿರುತ್ತಾನೆ ಎಂದು ನುಡಿಯುತ್ತಾರೆ. 1 ನೇ ಆರೋಪಿತನೂ ಮತ್ತು ನಾನು ಕೂಡಿಯೆ ವಾಸ ಮಾಡುತ್ತಿದ್ದೆವು ಎಂದರೆ ಸರಿ. ಆದರೆ ಈಗ ಅವರು ಮನೆ ಬಿಟ್ಟು ಸುಮಾರು 3-4 ವರ್ಷ ಆಗಿರಬಹುದು. 2 ನೇ ಆರೋಪಿತನು ಸಹ ಚಾಸಾ-1 ರವರ ಸಂಗಡ ದುಡಿಯಲು ಹೋಗಿರುತ್ತಾನೆ ಎಂದರೆ ಸಾಕ್ಷಿ ಹೋಗಿ ಬರುವುದು ಮಾಡುತ್ತಾನೆ ಎಂದು ನುಡಿಯುತ್ತಾರೆ.

4 ನೇ ಆರೋಪಿತಳು ವಡ್ಡರ ಓಣಿಯಲ್ಲಿ ಬಾಡಿಗೆ ಮನೆಯಲ್ಲಿ ಇರುತ್ತಾಳೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಈಗ ಅವರು ನಮ್ಮ ವಠಾರದಲ್ಲಿ ವಾಸ ಮಾಡುವುದಿಲ್ಲ ಮೊದಲಿಗೆ ವಾಸ ಮಾಡುತ್ತಿದ್ದರು ಅವರು ಸುಮಾರು 2-3 ವರ್ಷಗಳ ಹಿಂದೆ ಹೋಗಿರಬಹದು ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಆರೋಪಿತರು ಮೊದಲಿಗೆ ಮಂಗಳೂರಿಗೆ ಹೋಗಿ ಬರುವುದು ಮಾಡುತ್ತಿದ್ದರು ಎಂದು ನುಡಿಯುತ್ತಾರೆ.

ನಾವು ಮತ್ತು ಆರೋಪಿ ಒಟ್ಟಿಗೆ ವಾಸ ಮಾಡುವ ಅವಧಿಯಲ್ಲಿ ಜಗಳ ಮಾಡುತ್ತಿದ್ದೆವು ಅಂದರೆ ಸರಿಯಲ್ಲ. ನಾವು ಜಗಳ ಮಾಡುತ್ತಿದ್ದ ಕಾರಣ ಸದರಿ ಆರೋಪಿತರು ಎಲ್ಲರೂ ಬೇರೆ ಕಡೆ ವಾಸವಿದಾರೆ ಎಂದರೆ ಸಾಕ್ಷಿಯು ಸರಿಯಲ್ಲ ಎಂದು ನುಡಿಯುತ್ತಾರೆ.

ನಿಪಿ-1 ರಲ್ಲಿ ಬರೆದ ವಿಷಯದ ಬಗ್ಗೆ ನನಗೆ ಗೊತ್ತಿಲ್ಲ.

1 ನೇ ಆರೋಪಿತನ ಮನೆಯು ಪೂರ್ವಕ್ಕೆ ಬಾಗಿಲು ಲಗತ್ತು ಇರುತ್ತದೆ. 1 ನೇ ಆರೋಪಿತನ ಮನೆಯ ಪಶ್ಚಿಮಕ್ಕೆ ನನ್ನ ತಂದೆಯ ಹಿಸ್ಸಾ ಇರುತ್ತದೆ ಎಂದರೆ ಸರಿ. ನಮ್ಮ ಮನೆಗೆ ಮತ್ತು ಆರೋಪಿತರ ಮನೆಗೆ ಪ್ರವೇಶ ಮತ್ತು ಹೊರದ್ವಾರ ಮಾತ್ರ ಇರುತ್ತದೆ ಎಂದರೆ ಸರಿ. ನಮ್ಮ ಮನೆಯನ್ನು ನಾವು ಮುಖ್ಯ ದ್ವಾರದ ಮೂಲಕ ಉಪಬೋಗ ಮಾಡುತ್ತೇವೆ ಎಂದರೆ ಸರಿ. ಆರೋಪಿತರು ಹಿತ್ತಲು ಭಾಗದ ಮುಖಾಂತರ ಉಪಬೋಗ ಮಾಡುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಮುಖ್ಯ ದ್ವಾರ ಮತ್ತು ಹಿತ್ಸಲು ದ್ವಾರ ನಾವೇ ಉಪಬೋಗ ಮಾಡುತ್ತಿದ್ದೇವೆ ಎಂದು ನುಡಿಯುತ್ತಾರೆ.

ನಿಪಿ-1 ದೂರಿನಲ್ಲಿ ನನಗೆ ವೈಯಕ್ತಿಕ ಮಾಹಿತಿ ಇಲ್ಲಾ ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸ್ವತಃ ನಾನೇ ಬರೆದಿರುತ್ತೇನೆ ಎಂದು ನುಡಿಯುತ್ತಾರೆ. ಅದನ್ನು ಬರೆಯಲು ನನಗೆ ಯಾರು ಮಾಹಿತಿ ನೀಡಿಲ್ಲ.

ನಿಪಿ-1 ರಲ್ಲಿ ಯಲ್ಲಪ್ಪನು ರಾತ್ರಿ ವೇಳೆ ಕುಡಿದು ಬಂದು ತಂಟೆ ತಕರಾರು ಮಾಡುತ್ತಿದ್ದ ಆತನನ್ನು ಕರೆದು ನಾನು ಬುದ್ದಿ ಮಾತನ್ನು ಹೇಳಿರುತ್ತೇನೆ ಎಂದು ನಮೂದು ಮಾಡಿರುತ್ತೇನೆ ಆದರೆ ಅದು ಯಾವ ದಿನಾಂಕ ಎಂದು ನಿಖರವಾಗಿ ಹೇಳಲು ಬರುವುದಿಲ್ಲ. ಸದರಿ ದಿನಾಂಕವನ್ನು ನಾನು ನಿಪಿ-1 ರಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ.

ನನ್ನ ಹೆಸರಿನಲ್ಲಿ ಯಾವುದೇ ವಾಹನವು ಇರುವುದಿಲ್ಲ. 1, 2 ಹಾಗೂ 4 ನೇ ಆರೋಪಿತರು ಖಾಯಂ ಮಂಗಳೂರಿನಲ್ಲಿ ದುಡಿಯುತ್ತಾರೆ ಎಂದರೆ ಸರಿ. 4 ನೇ ಆರೋಪಿತಳು ಒಡ್ಡರ ಓಣಿಯಲ್ಲಿ ವಾಸವಿರುತ್ತಾರೆ ಎಂದರೆ ಸರಿ. 1, 2 ಹಾಗೂ 4 ನೇ ಆರೋಪಿತರ ಮನೆ ತುಂಬಾ ಚಿಕ್ಕದು ಇದೆ ಎಂದರೆ ಸರಿ.

ಮುದ್ದೆ ಮಾಲು 1 ಕಬ್ಬಿಣದ ರಾಡ ಸಾಮಾನ್ಯವಾಗಿ ಎಲ್ಲಾಕಡೆ ಸಿಗುತ್ತದೆ ಎಂದರೆ ಸರಿ. ಸಾಕ್ಷಿಗೆ ಈಗ ನ್ಯಾಯಾಲಯದ ಮುಂದೆ ಇದ್ದ ಮುದ್ದೆ ಮಾಲುಗಳನ್ನು ತೋರಿಸಿ ಘಟನಾ ದಿನದಂದು ಕತ್ತಲು ಇದ್ದ ಕಾರಣ ನನಗೆ ಯಾವ ದೊಣ್ಣೆಯಿಂದ ಹೊಡೆದಿರುತ್ತಾರೆ ಎಂದು ಹೇಳಲು ಬರುವುದಿಲ್ಲ ಅಂದರೆ ಸರಿಯಲ್ಲ.

ಆರೋಪಿತರು ಎಲ್ಲರೂ ಸೇರಿ ನನಗೆ ಬೈದಿದ್ದು, ನಿಂದಿಸಿದ್ದು ರಾಡನಿಂದ ಮತ್ತು ಬಡಿಗೆಯಿಂದ ಹೊಡೆದದ್ದು ಎಲ್ಲಾ ಸುಳ್ಳು ಅಂದರೆ ಸರಿಯಲ್ಲ.

ಚಾಸಾ-4 ರಿಂದ ಚಾಸಾ-7 ರವರು ನನ್ನ ಖಾಸಾ ಸಂಬಂದಿಕರು ಎಂದರೆ ಸರಿ. ಆರೋಪಿತರಿಗೆ ಮನೆಯಿಂದ ಹೊರಹಾಕಲು ಮತ್ತು ಅವರಿಗೆ ತೊಂದರೆ ನೀಡುವ ಉದ್ದೇಶದಿಂದ ನಾನು ಮತ್ತು ಚಾಸಾ-4

ರಿಂದ ಚಾಸಾ-7 ರವರು ಸೇರಿಕೊಂಡು ಆರೋಪಿತನ ವಿರುದ್ಧ ಸುಳ್ಳು ದೂರನ್ನು ದಾಖಲಿಸಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ನಾನು ನನ್ನ ವಾಹನಕ್ಕೆ ಡಿಜೈಲ್ ತರುವ ಸಮಯದಲ್ಲಿ ಕತ್ತಲಿನಲ್ಲಿ ಬಿದ್ದು ಪೆಟ್ಟು ಮಾಡಿಕೊಂಡು ಆರೋಪಿತರ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಅಂದರೆ ಸರಿಯಲ್ಲ. ನಾನು ಸ್ವತಃ ಬಿದ್ದು ಪೆಟ್ಟು ಮಾಡಿಕೊಂಡಿರುತ್ತೇನೆ ಅಂದರೆ ಸರಿಯಲ್ಲ.

ಆರೋಪಿತರಿಗೂ ಮತ್ತು ಘಟನೆಗೂ ಯಾವುದೇ ಸಂಬಂದ ಇಲ್ಲಾ ಅಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲಾ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)

**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**

**ನವಲಗುಂದ.**